# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ದಾಸರಹಳ್ಳಿ ವಲಯದ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 06-02-2021ರಂದು ಮಲ್ಲಸಂದ್ರ ವಾರ್ಡ್ ನಂ.13ರಲ್ಲಿ ನಡೆಸಲಾದ ವಾರ್ಡ್ ಸಭೆ ನಡವಳಿಕೆಗಳು</u>**

ದಿನಾಂಕ: 06-02-2021ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ಮಲ್ಲಸಂದ್ರ ವಾರ್ಡ್ ಸಂಖ್ಯೆ 13ರ ಕಛೇರಿಯಲ್ಲಿ ವಾರ್ಡ್ ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಡಾ.ಸುರೇಶ್.ಎಸ್‌ರವರು, ಸಹಾಯಕ ಅಭಿಯಂತರರಾದ ಶ್ರೀ ವೆಂಕಟೇಶಪ್ಪರವರು, ಆರೋಗ್ಯ ಇಲಾಖೆಯ ಶ್ರೀ ಪಾರ್ಥರವರು, ಘನತ್ಯಾಜ್ಯ ನಿರ್ವಹಣೆಯ ಶ್ರೀ ಲೋಹಿತ್‌ಕುಮಾರ್, ವಿದ್ಯುತ್ ಉಪವಿಭಾಗದಿಂದ ಶ್ರೀ ಶಶಿ (ಬೀದಿ ದೀಪ ನಿರ್ವಹಣೆ) ಕಲ್ಯಾಣ ಇಲಾಖೆಯ ಶ್ರೀ.ವೆಂಕಟರಾಯಪ್ಪ, ಬೆಂಗಳೂರು ಜಲ ಮಂಡಳಿಯಿಂದ ಲೋಕನಾಥ, ಇನ್ಸ್‌ಪೆಕ್ಟರ್ ಪಶುಪಾಲನೆ ಇಲಾಖೆಯಿಂದ ಶ್ರೀಮತಿ ಕೆ.ಎಸ್ ಸುಧಾಮಣಿ, ತೋಟಗಾರಿಕೆ ಇಲಾಖಾ ವತಿಯಿಂದ ಶಿವಲಿಂಗೇಗೌಡ ಭಾಗವಹಿಸಿದ್ದರು.

<u>ಸದರಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಗಳನ್ನು ತೀರ್ಮಾನಿಸಲಾಗಿದೆ.</u>

- **ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ**

  1. ವಾರ್ಡ್‌ಗಳಲ್ಲಿ ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದ ಶ್ರೀ ವೆಂಕಟೇಶ್, ಎಂ.ಪಿ. ಎಲೆಕ್ಟ್ರಿಕಲ್ಸ್ ಗುತ್ತಿಗೆದಾರರನ್ನು ಮುಂದಿನ ಸಭೆಗೆ ಹಾಜರಾಗಲು ಎಲ್ಲಾ ವಾರ್ಡ್ ಸದಸ್ಯರುಗಳು ಕೋರಿದ್ದು ಅದರಂತೆ ಗುತ್ತಿಗೆದಾರರನ್ನು ಮುಂದಿನ ಸಭೆಗೆ ಹಾಜರಾಗಲು ಸೂಚಿಸಲಾಯಿತು ಹಾಗೂ ಶ್ರೀ ಶಶಿರವರು, ಬೀದಿದೀಪ ನಿರ್ವಹಣೆರವರಿಗೆ ಸರಿಯಾಗಿ ಕಾರ್ಯನಿರ್ವಹಿಸಲು ಸೂಚಿಸಲಾಯಿತು.

- **ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ**

ವಾರ್ಡ್ ನಂ. 13ರಲ್ಲಿ ಇರುವ ಮಲ್ಲಸಂದ್ರ ಕೆರೆಯ ಉಸ್ತುವರಿಯನ್ನು ಈಗಾಗಲೇ ಲೇಕ್ ಎ.ಇ.ಇ. ರವರು ಕೆರೆಯ ಬೌಂಡರಿಯನ್ನು ಮಾರ್ಕ್ ಮಾಡಿ ತೆರೆವುಗೋಳಿಸಲು ಸೂಚಿಸಿರುತ್ತಾರೆ. ಆದರೆ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರು ಹಾಲಿ ಮಾಡಿರುವ ಮಾರ್ಕ್ ಸರಿ ಇಲ್ಲಾ ಅದ್ದರಿಂದ ಮತ್ತೊಮ್ಮೆ ಸರ್ವೆ ನಂ.53 ಹಾಗೂ 50 ರ ಸರ್ವೆ ಮಾಡಿ, ಗಡಿಯನ್ನು ಗುರುತಿಸಲು ಕೋರಿರುತ್ತಾರೆ. ಅದರಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ತುರ್ತಾಗಿ ಸರ್ವೆ ಮಾಡಿಸಿ ಕೆರೆಯ ಹದ್ದು ಬಸ್ತುನ್ನು ಫಿಕ್ಸ್ ಮಾಡಿಸಿಕೊಡಲು ಸಭೆಯಲ್ಲಿ ಸೂಚಿಸಲಾಯಿತು.

- **ಆರೋಗ್ಯ ಇಲಾಖೆ ಹಾಗೂ ಘನತ್ಯಾಜ್ಯ ವಿಭಾಗಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

  ಆರೋಗ್ಯ ಇಲಾಖೆಯ ಶ್ರೀ ಪಾರ್ಥರವರು (ಹಿರಿಯ ಆರೋಗ್ಯಾಧಿಕಾರಿಗಳು)

  1. ಪ್ರದೇಶ ವಾರು ಸೊಳ್ಳೆ ಔಷಧಿಯನ್ನು ಸಮರ್ಪಕವಾಗಿ ಸಿಂಪಡಿಸುತ್ತಿರುವುದಾಗಿ ತಿಳಿಸಿದರು

Scanned with CamScanner

2. ವಾರ್ಡ್ 13ರ ಸಮಿತಿ ಸದಸ್ಯರಾದ ಶ್ರೀ ಬೈಲಪ್ಪರವರು ರವೀಂದ್ರನಗರ, 11ನೇ ರಸ್ತೆಯಲ್ಲಿ ಸರಿಯಾಗಿ ಕಸವನ್ನು ತೆಗೆಯುತ್ತಿಲ್ಲ ಎಂದು ಆಕ್ಷೇಪಿಸಿದರು ಉತ್ತರವಾಗಿ ಶ್ರೀ ಲೋಹಿತ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
3. ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಪ್ರತಿ ದಿನ ಕೋವಿಡ್-19 ಟೆಸ್ಟ್ ಮಾಡಲಾಗುತ್ತಿದೆ. ಲಿಂಕ್ ವರ್ಕರ್ಸ್‌ಗಳು ಆಸ್ಪತ್ರೆಯಿಂದ ಮೆಡಿಕಲ್ ಕಿಟ್‌ಗಳನ್ನು ಪಡೆದು ರೋಗಿಗಳ ಸ್ಥಳಕ್ಕೆ ನೀಡುವ ಕೆಲಸ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕ್ಯಾಂಪ್ ನಡೆಸುವ ಕಾರ್ಯವನ್ನು ಮಾಡುತ್ತಿದಾರೆ ಹಾಗು ವಾರದಲ್ಲಿ ಮೂರು ದಿವಸ ಹೋಮ್ ಕ್ವಾರೆಂಟೈನ್ ಆದವರನ್ನು ಬೇಟಿ ಮಾಡಿ ಯೋಗಕ್ಷೇಮ ವಿಚಾರಿಸುತ್ತಿದಾರೆ ಎಂದು ತಿಳಿಸಿದರು.

- **ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮಲ್ಲಸಂದ್ರ ರಸ್ತೆ ವಿಭಾಗ ಕಛೇರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

- ಕಳೆದ ಸಭೆಯಲ್ಲಿ ಸೂಚಿಸಿರುವಂತೆ ವಾರ್ಡ್ ವ್ಯಾಪ್ತಿಯ ಎಲ್ಲಾ ಭಾಗಗಳಲ್ಲಿ ಚರಂಡಿಯ ಮೇಲೆ "ಕವರಿಂಗ್ ಸ್ಲ್ಯಾಬ್" ಹಾಕಲಾಗಿರುವುದಾಗಿ ಸಂಬಂಧಪಟ್ಟ ಸಹಾಯಕ ಇಂಜಿನಿಯರ್ ತಿಳಿಸಿದರು. ಬಾಕಿ ಇರುವುದನ್ನು ತಿಳಿಸಿದ್ದಲ್ಲಿ ಹಾಕಲಾಗುವುದು ಎಂದು ತಿಳಿಸಿದರು.
- **ಬಿ.ಡಬ್ಲ್ಯು.ಎಸ್.ಎಸ್.ಬಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

  ಹಾಲಿ ಮಲ್ಲಸಂದ್ರ ವಾರ್ಡ್‌ನಲ್ಲಿ ಹಲವಾರು ಕಡೆ ರಸ್ತೆಗಳನ್ನು ಅಗೆದು ಒಳಚರಂಡಿ ಮತ್ತು ಕಾವೇರಿ ಪೈಪ್‌ಗಳನ್ನು ಅಳವಡಿಸುವುದು ಕಂಡು ಬಂದಿದ್ದು, ಈ ಕಾಮಗಾರಿಗಳನ್ನು ನಿರ್ವಹಿಸುವ ಮೊದಲು ಯಾವ ರಸ್ತೆಗಳಲ್ಲಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ ಎಂಬ ಬಗ್ಗೆ ವಾರ್ಡ್‌ನ ಬಿಬಿಎಂಪಿ ಇಂಜಿನಿಯರ್‌ವರಿಗೆ ಮಾಹಿತಿ ನೀಡಲು ಸೂಚಿಸಿ ಹಾಗೂ ಈ ಕಾಮಗಾರಿಗಳಿಗೆ ಸಂಬಂಧಿಸಿದ ಅಂದಾಜು ಪಟ್ಟಿಗಳು ಹಾಗೂ ನೀಡಿರುವ ಬಿಲ್ಲುಗಳ ವಿವರಗಳನ್ನು ವಾರ್ಡ್ ಸಮಿತಿಗೆ ಪ್ರತಿ ಸಭೆಗೆ ಸಲ್ಲಿಸಲು ಸೂಚಿಸಲಾಯಿತು. ಮತ್ತು ಹಾಲಿ ಬಿ.ಡಬ್ಲ್ಯು.ಎಸ್.ಎಸ್.ಬಿ ರವರು ರಸ್ತೆಗಳಲ್ಲಿ ಅಗೆದಿರುವ ಕಾಂಕ್ರೀಟ್/ಮಣ್ಣನ್ನು ತೆಗೆದು "Wetmix macdom" ಹಾಕಿ ಸಾರ್ವಜನಿಕರು ಓಡಾಡಲು ಅನುಕೂಲ ಮಾಡಿಕೊಡುವಂತೆ ಸೂಚಿಸಲಾಯಿತು

ಇತರೆ ವಿಷಯಗಳು

1. ಮಲ್ಲಸಂದ್ರ ವಾರ್ಡ್ ಸಂ.13 ರ ವ್ಯಾಪ್ತಿಯಲ್ಲಿ ಹಾಲಿ ಬೆಸ್ಕಾಂ ವತಿಯಿಂದ ರಸ್ತೆಗಳಲ್ಲಿ ಕೇಬಲ್ ಅಳವಡಿಸುತ್ತಿದ್ದು, ಎಲ್ಲಾ ಕಡೆ ಗುಂಡಿಗಳು ಬಿದ್ದಿದ್ದು, ಮಣ್ಣಿನ ಗುಡ್ಡೆ ರಾಶಿ ರಾಶಿಯಲ್ಲಿ ಬೀಳುತ್ತಿದೆ. ಇದರಿಂದ ರಸ್ತೆಗಳಲ್ಲಿ ವಾಹನ ಸಂಚರಿಸಲು ತುಂಬಾ ತೊಂದರೆ ಆಗುತ್ತಿದ್ದು, ತುರ್ತಾಗಿ ರಸ್ತೆಯಲ್ಲಿ ಬಿದ್ದಿರುವ ಮಣ್ಣನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.
2. ಮಲ್ಲಸಂದ್ರ ವಾರ್ಡ್ ಸಂ.13 ರ ವ್ಯಾಪ್ತಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಮಹದೇವ್ ಮಾರ್ಷೆಲ್ ರವರಿಗೆ ಪೈಪ್‌ಲೈನ್ ಪಾರ್ಕ್‌ನಲ್ಲಿ ಸಂಜೆ ಸುಮಾರು 7.00ಗಂಟೆಯಿಂದ 10.00 ಗಂಟೆಯವರೆಗೆ ಕಾರ್ಯನಿರ್ವಹಿಸಲು ಸೂಚಿಸಲಾಯಿತು.

Scanned with CamScanner

3. ಕಲ್ಯಾಣನಗರ ವ್ಯಾಪ್ತಿಯಲ್ಲಿ ಹಾಲಿ ಬೋರ್‌ವೆಲ್ ದುರಸ್ತಿಗೊಂಡಿದ್ದು, ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದ್ದು, ತುರ್ತಾಗಿ ದುರಸ್ತಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.
4. ರಸ್ತೆಯ ಬದಿಗಳಲ್ಲಿರುವ ಮರಗಳನ್ನು ಅರಣ್ಯ ಇಲಾಖೆಯ ಸಿಬ್ಬಂಧಿಗಳು ಹಾಗೂ ಬೆಸ್ಕಾಂ ಸಿಬ್ಬಂಧಿಗಳು ಕಡಿಯುತ್ತಿದ್ದು ಕಡಿದ ಮರಗಳ ಕೊಂಬೆಗಳನ್ನು ಎರಡು ಇಲಾಖೆಯ ಸಿಬ್ಬಂಧಿಗಳು ಸಮನ್ವಯ ಸಾಧಿಸಿ ಸ್ವಚ್ಛಗೊಳಿಸಲು ಸೂಚಿಸಲಾಯಿತು

ನೋಡಲ್ ಅಧಿಕಾರಿಗಳು ಹಾಗು ಅಧ್ಯಕ್ಷರು,
ವಾರ್ಡ್ ಸಂಖ್ಯೆ.13 ಮಲ್ಲಸಂದ್ರ

ಸಹಾಯಕ ಅಭಿಯಂತರರು ಹಾಗು ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ.13, ಮಲ್ಲಸಂದ್ರ

ಪ್ರತಿಯನ್ನು:-

1. ಮಾನ್ಯ ಆಯುಕ್ತರು, ಬಿಬಿಎಂಪಿ ನರಸಿಂಹರಾಜ ಚೌಕ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಅಧ್ಯಕ್ಷರು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಮಾನ್ಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ) ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
8. ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ. ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
9. ಕಲ್ಯಾಣಾಧಿಕಾರಿಗಳು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
10. ಸಹಾಯಕ ನಿರ್ದೇಶಕರು, (ಪಶುಪಾಲನೆ) ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
11. ಸಹ ಕಂದಾಯ ಅಧಿಕಾರಿ, ಮಲ್ಲಸಂದ್ರ ಉಪ ವಿಭಾಗ, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

Scanned with CamScanner